ಏನು ತೆಗೆದುಕೊಂಡಿದ್ದೀರಿ. ಲುಕ್ಸಾನು ಮುತ್ತೊಂದು ಮಾಡಿರತಕ್ಕ ಆಡಳಿತ ಮಂಡಳಿಗಳಮೇಲೆ ಯಾವ ರೀತಿಯ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೀರಾ ಎನ್ನುವುದನ್ನು ತಿಳಿಸಬೇಕು.

(ಗೊಂದಲ)

ಶ್ರೀ ಆರ್. ಬಿ. ಪ್ರೋತ್‌ದಾರ್.—ತಾವು ಅಷ್ಟೊಂದು ಪ್ರಶ್ನೆ ಕೇಳಿದರೆ ನಾನು ಉತ್ತರ ಹೇಳಲಿಕ್ಕೆ ಆಗುವುದಿಲ್ಲ.

(ಗೊಂದಲ)

ಶ್ರೀ ಎಂ. ಎಸ್. ಪಾಟೀಲ್.—ಕೋಟ್ಯಾಂತರ ರೂಪಾಯಿ ಆಸ್ತಿ ಪ್ರಶ್ನೆ ಇದು.

ಶ್ರೀ ಎಸ್. ಆರ್. ಬೊಪ್ಪಾಯಿ.—ಈ ಸದನದಲ್ಲಿ ನಾನು ಈಗಾಲೇ ಉತ್ತರ ಹೇಳಿದ್ದೇನೆ. ನಷ್ಟ ಹೊಂದಿರತಕ್ಕ ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು ಪುನರ್‌ಜ್ಜೀವನಗೊಳಿಸುವ ಬಗ್ಗೆ ಈಗಾಗಲೇ ಕ್ಯಾಬಿನೆಟ್ ಸಬ್ ಕಮಿಟಿ ಮಾಡಿದ್ದೇವೆ, ಎಕ್ಸ್‌ಪರ್ಟ್ ಒಪಿನಿಯನ್ ತೆಗೆದುಕೊಂಡಿದ್ದೇವೆ, ಆ ದಿಸೆಯಲ್ಲಿ ಹೆಜ್ಜೆ ಇಡುತ್ತೇವೆ. ಮಾನ್ಯ ಕೆ. ಹೆಚ್. ಪಾಟೀಲರು ಹೇಳಿದ ಹಾಗೆ ಈ ಚಳುವಳಿಯಲ್ಲಿರ ತಕ್ಕವರು ನಿಷ್ಪಾವಂತರಾಗಿ ಸರಿಯಾಗಿ ಕೆಲಸ ಮಾಡಿದರೆ ಈ ಸಂಸ್ಥೆಗಳು ಉದ್ಧಾರವಾಗುತ್ತವೆ. ಆ ದಿಸೆಯಲ್ಲಿ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಸ್. ಹೆಚ್. ಕೌಜಲಗಿ.—ಸೆಕ್ಷನ್ ೬೪ರ ಪ್ರಕಾರ ಯಾವ ಯಾವ ಸಹಕಾರಿ ಸಕ್ಕರೆ ಕಾರ್ಖಾನೆಗಳ ಬಗ್ಗೆ ಎನ್‌ಕ್ವಯಿರಿ ನಡೆದಿದೆ ಅವುಗಳ ಹೆಸರುಗಳನ್ನು ತಿಳಿಸುತ್ತೀರಾ ?

ಶ್ರೀ ಆರ್. ಬಿ. ಪ್ರೋತ್‌ದಾರ್.—ಈಗ ರಾಯಭಾಗ್ ಹೆಸರು ಹೇಳಿದೆ. ತಾವು ಮುತ್ತೊಂದು ಪ್ರಶ್ನೆಯನ್ನು ಕೇಳಿದರೆ ಉತ್ತರ ಹೇಳುತ್ತೇನೆ.

ಅಂಗನವಾಡಿಗಳನ್ನು ತಾಲ್ಲೂಕುಗಳಲ್ಲಿ ಪ್ರಾರಂಭಿಸುವುದು

೯೯೪ (೨೭೫೯) ಶ್ರೀ ಆರ್. ಎನ್. ನಾಯ್ಕ (ಭಟ್ಕಳ).—ಮಾನ್ಯ ಸಮಾಜಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಅಂಗನವಾಡಿಗಳನ್ನು ನಡೆಸಲಾಗುತ್ತಿರುವ ತಾಲ್ಲೂಕುಗಳಾವುವು ಮತ್ತು ಪ್ರಸಕ್ತ ವರ್ಷ ಅಂಗನವಾಡಿಗಳನ್ನು ಪ್ರಾರಂಭಿಸಲು ಸರ್ಕಾರ ಉದ್ದೇಶಿಸಿರುವ ತಾಲ್ಲೂಕುಗಳಾವುವು ?

ಆ) ರಾಜ್ಯದಲ್ಲಿರುವ ತರಬೇತಿ ಹೊಂದಿದ ನಿರುದ್ಯೋಗಿ ಅಂಗನವಾಡಿ ಶಿಕ್ಷಕಿಯರ ಸಂಖ್ಯೆ ಎಷ್ಟು ? (ಜಿಲ್ಲಾವಾರು ಮಾಹಿತಿ ನೀಡುವುದು)

ಇ) ಉತ್ತರ ಕನ್ನಡ ಜಿಲ್ಲಾ ಪರಿಷತ್‌ನವರು ಬಾಲವಾಡಿಗಳನ್ನು ಡೆಸುತ್ತಿರುವ ಸಂಖ್ಯೆ ಎಷ್ಟು ?

ಈ) ಹೊನ್ನಾವರ ತಾಲ್ಲೂಕಿನಲ್ಲಿ ಕೇಂದ್ರ ಸರ್ಕಾರದ ಸಹಾಯದಿಂದ ಅಂಗನವಾಡಿಗಳನ್ನು ಪ್ರಾರಂಭಿಸಬೇಕೆಂದು ಉದ್ದೇಶಿಸಲಾಗಿರುವುದು ನಿಜವೇ ?

ಶ್ರೀ ಜಿ. ಬಸವಣಪ್ಪ (ಸಮಾಜ ಕಲ್ಯಾಣ ಸಚಿವರು).—

(ಅ) ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ, ಸೂಪಾ, ಮುಮಟಾ ಮತ್ತು ಯಲ್ಲಾಪುರ ತಾಲ್ಲೂಕುಗಳಲ್ಲಿ ಅಂಗನವಾಡಿಗಳನ್ನು (ಬಾಲವಿಕಾಸ ಯೋಜನೆಗಳನ್ನು) ನಡೆಸಲಾಗುತ್ತಿದೆ. ಪ್ರಸಕ್ತ ವರ್ಷ ಅಂಗನವಾಡಿಗಳನ್ನು ಪ್ರಾರಂಭಿಸಲು ಕೇಂದ್ರ ಸರ್ಕಾರದಿಂದ ಆದೇಶ ನಿರೀಕ್ಷಿಸಲಾಗುತ್ತಿದೆ. ಯಾವ ಯಾವ ತಾಲ್ಲೂಕುಗಳಲ್ಲಿ ಅಂಗನವಾಡಿಗಳನ್ನು ಪ್ರಾರಂಭಿಸುವ ಬಗ್ಗೆ ನಿಖರವಾಗಿ ಇನ್ನೂ ತಿಳಿದು ಬಂದಿಲ್ಲ.

(ಆ) ಇಲ್ಲ.

(ಇ) ಈ ಇಲಾಖೆಗೆ ಅನ್ವಯಿಸುವುದಿಲ್ಲ. ಸಂಬಂಧಪಟ್ಟ ಇಲಾಖೆಯಿಂದ ಉತ್ತರ ತರಿಸಿ ಒದಗಿಸಲಾಗುವುದು.

(ಈ) ಇಲ್ಲ.

ಶ್ರೀ ಆರ್. ಎನ್. ನಾಯಕ್.—ಅಧ್ಯಕ್ಷರೆ, ರಾಜ್ಯದಲ್ಲಿ ತರಬೇತಿ ಹೊಂದಿದ ನಿರುದ್ಯೋಗಿ ಅಂಗನವಾಡಿ ಶಿಕ್ಷಕಿಯರ ಸಂಖ್ಯೆ ಎಷ್ಟು ಎಂದು ಕೇಳಿದ್ದಕ್ಕೆ ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಇಲ್ಲ ಎಂದು ಹೇಳಿದ್ದಾರೆ. ನಾನು ಕೇಳಿದ ಉದ್ದೇಶ ಈ ತರಬೇತಿ ಪಡೆದವರ ಸಂಖ್ಯೆ ತಿಳಿಯಲಿಕ್ಕೆ ಕೇಳಿದ್ದು.

ಶ್ರೀ ಜಿ. ಬಸವಣಪ್ಪ.—ಅಂಗನವಾಡಿ ಕಾರ್ಯಕರ್ತೆಯರು ೧೪,೧೦೧.

ಶ್ರೀ ಆರ್. ಎನ್. ನಾಯಕ್.—ತಮ್ಮ ಉತ್ತರದಲ್ಲಿ ಇಲ್ಲ ಎಂದು ಕೊಟ್ಟಿದ್ದೀರಿ.

ಶ್ರೀ ಜಿ. ಬಸವಣಪ್ಪ.—ತಾವು ತಮ್ಮ ಪ್ರಶ್ನೆ ಅರ್ಥ ಮಾಡಿಕೊಳ್ಳಬೇಕು. ನಿರುದ್ಯೋಗಿ ಅಂಗನವಾಡಿ ಶಿಕ್ಷಕಿಯರು ಇಲ್ಲ. ಅಂದರೆ ನಿರುದ್ಯೋಗಿ ಅಂಗನವಾಡಿ ಕಾರ್ಯಕರ್ತೆಯರು ಇಲ್ಲ. ಯಾರು ಯಾರು ಅಂಗನವಾಡಿ ಕಾರ್ಯಕರ್ತೆಯರು ಇದ್ದಾರೆ ಅವರಿಗೆಲ್ಲಾ ಉದ್ಯೋಗ ಇದೆ.

ಶ್ರೀ ಆರ್. ಎನ್. ನಾಯಕ್.—ಬಾಲವಾಡಿ ನರ್ಸಿಂಗ್ ಟ್ರೈನಿಂಗ್ ಆಗಿರುವವರ ಅಂದರೆ ಶಿಕ್ಷಕಿಯರ ಸಂಖ್ಯೆ ಎಷ್ಟಿದೆ? ಒಟ್ಟು ಸಂಖ್ಯೆಯನ್ನು ಹೇಳುವುದಕ್ಕಾಗದಿದ್ದರೂ ಅಂದಾಜು ಎಷ್ಟಿದ್ದಾರೆಂಬುದನ್ನು ಹೇಳುವುದಕ್ಕೆ ಸಾಧ್ಯವೆ? ಈ ರೀತಿ ಟ್ರೈನಿಂಗ್ ಆಗಿರುವವರು ಯಾರಿದ್ದಾರೆ, ಅವರು ನಿರುದ್ಯೋಗಿಗಳಾಗಿದ್ದಾರೆ. ನೀವು ಹೇಗಿದ್ದರೂ ಅಂಗನವಾಡಿಗಳನ್ನು ತೆರೆಯುತ್ತೀರಿ. ಅವುಗಳನ್ನು ತೆರೆಯುವ ಸಂದರ್ಭದಲ್ಲಿ ಯಾರು ಬಾಲವಾಡಿ ನರ್ಸಿಂಗ್ ಟ್ರೈನಿಂಗ್ ಆದ ಶಿಕ್ಷಕಿಯರು ಇರುತ್ತಾರೆ ಇವರನ್ನೇ ಅಂಗನವಾಡಿ ಕಾರ್ಯಕರ್ತೆಯರ ಜಾಗದಲ್ಲಿ ನೇಮಕ ಮಾಡಿ ಅವರಿಗೆ ಏನು ಸಂಬಳವನ್ನು ಕೊಡುತ್ತೀರೋ ಅದೇ ಸಂಬಳವನ್ನು ಇವರಿಗೇ ಕೊಟ್ಟು ಕೆಲಸಮಾಡಿಸಿಕೊಳ್ಳುತ್ತೀರಾ?

ಶ್ರೀ ಜಿ. ಬಸವಣ್ಣಪ್ಪ.—ಸುಮಾರು ೫೯ ಬಾಲವಾಡಿಗಳಿವೆ. ಇವು ನನ್ನ ಇಲಾಖೆಗೆ ಬರುವುದಿಲ್ಲ. ವಿದ್ಯಾಭ್ಯಾಸ ಇಲಾಖೆಗೆ ಬರುತ್ತವೆ.

ಶ್ರೀ ಆರ್ ಎನ್. ನಾಯಕ್.—ಬಾಲವಾಡಿ ನರ್ಸಿಂಗ್ ಟ್ರೈನಿಂಗ್ ಆದವರೇ ಬೇಕು, ನರ್ಸಿಂಗ್ ಸ್ಕೂಲುಗಳನ್ನು ತೆರೆಯಬೇಕು, ಇದಕ್ಕೆಲ್ಲಾ ಶಿಕ್ಷಣ ಇಲಾಖೆಗೆ ಹೆಚ್ಚು ಖರ್ಚು ಬರುತ್ತದೆಂದು ಏನಾದರೂ ಯೋಚನೆ ಮಾಡುತ್ತಿದ್ದೀರಾ? ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಬಾಲವಾಡಿ ಟ್ರೈನಿಂಗ್ ಆಗಿರುವವರು ಬಹಳಷ್ಟು ಮಂದಿ ಶಿಕ್ಷಕಿಯರು ನಿರುದ್ಯೋಗಿಗಳಾಗಿದ್ದಾರೆ. ನೀವು ತೆರೆಯುವ ಅಂಗನವಾಡಿಗಳಲ್ಲಿ ಅಂಗನವಾಡಿ ಕಾರ್ಯಕರ್ತೆಯರನ್ನು ನೇಮಕ ಮಾಡಿಕೊಳ್ಳುವುದಕ್ಕೆ ಬದಲಾಗಿ ಬಾಲವಾಡಿ ಟ್ರೈನಿಂಗ್ ಆಗಿರುವವರನ್ನೇ ನೇಮಕ ಮಾಡಿಕೊಂಡು ಅವರಿಗೆ ನೀವು ಕೊಡುವ ಸಂಬಳವನ್ನೇ ಇವರಿಗೇ ಕೊಟ್ಟರೆ ಸ್ವಲ್ಪ ದಿವಸದ ಮಟ್ಟಿಗಾದರೂ ಇವರಿಗೆ ಕೆಲಸ ಸಿಕ್ಕುತ್ತದೆಂಬ ಉದ್ದೇಶದಿಂದ ನಾನು ಈ ಪ್ರಶ್ನೆಯನ್ನು ಕೇಳಿದ್ದೇನೆ. ತಾವು ಈ ರೀತಿ ಏನಾದರೂ ಮಾಡುತ್ತೀರಾ?

ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಸಲಹೆ ಬಹಳ ಬಳ್ಳಿಯದಿದೆ. ಇನ್ನು ಮುಂದೆ ಏನು ಪ್ರಾಜೆಕ್ಟ್‌ಗಳು ಹೊಸದಾಗಿ ಬರುತ್ತವೆ ಅಲ್ಲೆಲ್ಲಾ ಅಂಗನವಾಡಿ ಕಾರ್ಯಕರ್ತೆಯರನ್ನು ನೇಮಕ ಮಾಡಿಕೊಳ್ಳಬೇಕಾಗುತ್ತದೆ. ಆ ಸಂದರ್ಭದಲ್ಲಿ ಮಾನ್ಯ ವಿದ್ಯಾಮಂತ್ರಿಗಳ ಜೊತೆ ಈ ವಿಚಾರವನ್ನು ಪ್ರಸ್ತಾಪಮಾಡಿ ಇದರ ಸಾಧಕ ಬಾಧಕಗಳನ್ನು ಚರ್ಚೆ ಮಾಡಿ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಆರ್. ಎನ್. ನಾಯಕ್.—ಉತ್ತರ ಕನ್ನಡ ಜಿಲ್ಲೆಯ ಅಂಕೋಲ, ಸೂಪ, ಕುಮಟಾ, ಯಲ್ಲಾಪುರ ತಾಲ್ಲೂಕುಗಳನ್ನು ಹೇಳಿದ್ದೀರಿ. ಈಗ ಹೊನ್ನಾವರ ತಾಲ್ಲೂಕಿನಲ್ಲಿ ಮಾಡಬೇಕಾದ್ದು ಬಹಳ ಮುಖ್ಯವಾಗಿದೆ. ಏಕೆಂದರೆ ಇದು ಗುಡ್ಡಗಾಡು ಪ್ರದೇಶ. ಆದ್ದರಿಂದ ಇಲ್ಲಿ ನೀವು ಅಂಗನವಾಡಿಗಳನ್ನು ತೆರೆಯಲೇಬೇಕು. ನನಗೆ ನೆನಪಿರುವಂತೆ ಈಗ್ಗೆ ೨ ವರ್ಷಗಳ ಹಿಂದೆ ಹೊನ್ನಾವರ ತಾಲ್ಲೂಕಿನಲ್ಲಿ ಅಂಗನವಾಡಿಗಳನ್ನು ತೆರೆಯಲಾಗುತ್ತದೆಂದು ರೇಡಿಯೋದಲ್ಲಿ ಬಂತು. ಆದರೆ ಈಗ ನೋಡಿದರೆ ನೀವು ಇಲ್ಲ ಎಂದು ಹೇಳುತ್ತಿದ್ದೀರಿ. ನೀವು ಇದನ್ನು ಸಂಪೂರ್ಣವಾಗಿ ಮುಳುಗಿಸಿ ಬಿಟ್ಟಿದ್ದೀರಿ. ಈ ವಿಚಾರ ಹಿಂದೆ ಪೇಪರ್‌ನಲ್ಲೂ ಬಂದಿತ್ತು, ರೇಡಿಯೋದಲ್ಲೂ ಬಂದಿತ್ತು. ನಾನು ತಮಗೆ ಕೇಳುತ್ತೇನೆ, ಈ ಅಂಗನವಾಡಿಗಳನ್ನು ತೆರೆಯಬೇಕಾದರೆ ನಿಮಗೆ ಎಷ್ಟು ಖರ್ಚು ಬರುತ್ತದೆ? ಕೇಂದ್ರ ಸರ್ಕಾರದಿಂದ ಎಷ್ಟು ಹಣ ಬರುತ್ತದೆ? ಯಾವಾಗ ಇದನ್ನು ತೆರೆಯುತ್ತೀರಿ? ಹೊನ್ನಾವರ ತಾಲೂಕಿಗೆ ತಾವು ಆದ್ಯತೆಯನ್ನು ಕೊಡುತ್ತೀರಾ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಜಿ. ಬಸವಣ್ಣಪ್ಪ.—ಸಮಗ್ರ ಬಾಲವಿಕಾಸ ಯೋಜನೆ ಏನಿದೆ ಇದು ಅತ್ಯುತ್ತಮ ಯೋಜನೆ. ೬ ವರ್ಷದ ಮಕ್ಕಳಿಗೆ ಪೌಷ್ಟಿಕಾಹಾರ ಕೊಡತಕ್ಕದ್ದು, ರೋಗ ನಿರೋಧಕ ಚುಚ್ಚು ಮದ್ದು ಕೊಡತಕ್ಕದ್ದು, ಶಾಲಾಪೂರ್ವ ತರಬೇತಿಯನ್ನು ಕೊಡತಕ್ಕದ್ದು ಈ ಕಾರ್ಯಕ್ರಮದ ಉದ್ದೇಶ. ನ್ಯಾಯವಾಗಿ ಈ ಯೋಜನೆ ಎಲ್ಲಾ ತಾಲೂಕುಗಳಲ್ಲೂ ಜಾರಿಗೆ ಬರಬೇಕು. ಈಗ ಒಟ್ಟು ೯೪ ಪ್ರದೇಶಗಳಲ್ಲಿ ಈ ಪ್ರಾಜೆಕ್ಟ್‌ಗಳಿವೆ. ಇನ್ನೂ ೮೭ ತಾಲೂಕುಗಳಲ್ಲಿ ಇದು ವಿಸ್ತರಣೆ ಆಗಬೇಕಾಗಿದೆ. ಇದನ್ನು ಎಲ್ಲ ತಾಲ್ಲೂಕುಗಳಿಗೂ ವಿಸ್ತರಿಸಬೇಕೆಂಬುದನ್ನು ಈ ಹಿಂದೆಯೇ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಎರಡೂ ಕೂಡ ಒಪ್ಪಿಕೊಂಡಿವೆ. ಈ ವರ್ಷ ೧೪ ತಾಲ್ಲೂಕುಗಳಿಗೆ ಕೊಡುವುದಕ್ಕೆ ಕೇಂದ್ರ ಸರ್ಕಾರ ಒಪ್ಪಿದೆ. ಆದರೆ ಇದಕ್ಕೆ ಕೆಲವು ನಾರಂಸ್ ಇವೆ. ಇದಕ್ಕೆ ಬೇಕಾದ ಸ್ಥಳವನ್ನು ಕೇಂದ್ರ ಸರ್ಕಾರದವರೇ ಗುರುತು ಮಾಡಬೇಕು. ಎಸ್.ಸಿ., ಎಸ್.ಟಿ. ಜನಾಂಗ ಜಾಸ್ತಿ ಇರಬೇಕು, ಬ್ಯಾಕ್‌ವರ್ಡ್ ಕ್ಲಾಸ್ ಜನಾಂಗ ಇರಬೇಕು, ಈ ರೀತಿಯ ಕ್ರೈಟೀರಿಯ ಆಧಾರದ ಮೇಲೆ ಅವರು ಕೊಡುತ್ತಾರೆ. ಈಗಾಗಲೇ ನಾವು ೮೭ ತಾಲೂಕುಗಳ ಚಿತ್ರ ಹಾಗೂ ಸೆನ್ಸಸ್‌ನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇವೆ. ಅದರಲ್ಲಿ ಹೊನ್ನಾವರ ಬರಬಹುದು, ಸಿರ್ಸಿ, ಸಿದ್ದಾಪುರ ಬರಬಹುದು ಅಥವಾ ಬೇರೆಯದು ಬರಬಹುದು ಅದು ನಮಗೆ ಗೊತ್ತಿಲ್ಲ.

ಶ್ರೀ ಆರ್. ಎನ್. ನಾಯಕ್.—೮೭ ತಾಲ್ಲೂಕುಗಳನ್ನು ಕೇಂದ್ರ ಸರ್ಕಾರಕ್ಕೆ ಏನು ಸೂಚನೆ ಮಾಡಿದ್ದೀರಿ ಅದರಲ್ಲಿ ನಮ್ಮ ಹೊನ್ನಾವರ ತಾಲ್ಲೂಕು ಇದೆಯೆ ಎಂಬುದನ್ನು ಹೇಳಬೇಕು.

ಶ್ರೀ ಜಿ. ಬಸವಣ್ಣಪ್ಪ.—೮೭ ತಾಲ್ಲೂಕುಗಳು ಮಾತ್ರ ಏನು ಉಳಿದಿವೆ ಅವೆಲ್ಲವನ್ನೂ ನಾನು ಚಿತ್ರ ಸಮೇತ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇನೆ. ಅಂದಮೇಲೆ ಅದರಲ್ಲಿ ನಿಮ್ಮ ಹೊನ್ನಾವರ ಇದ್ದೇ ಇರುತ್ತದೆ.

COMPLAINTS ABOUT THE BAD WORKING OF THE TAHSILDAR OFFICE AT YADAGIR

895 (2731) SRI MALLIKARJUNA KHARGE(**Gurumttkal**).—Will the honourable Minister for Revenue, Planning, Major and Medium Irrigation be pleased to state;—

(a) Whether the Government has received any complaints about the bad working of the Tahsildar office at Yadagir?

(b) If so, the action taken by the Government in this regard?

SRI S. R. BOMMAI (Minister for Revenue).—

(a) Yes.

(b) The Divisional Commissioner, Gulbarga Division, Gulbarga has been requested to investigate into the allegations and to submit a detailed report to Government for taking further action.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಅಧ್ಯಕ್ಷರೇ, ನನ್ನ ಮೊದಲನೆಯ ಪ್ರಶ್ನೆಗೆ Whether the Government has received any complaints about the bad working of the Tahsildar office at Yadagir ಎಂದು ಕೇಳಿದ್ದಕ್ಕೆ Yes ಎಂದೂ, ನನ್ನ ಎರಡನೆ ಪ್ರಶ್ನೆ If so, the action taken by the Government in this regard ಎಂದು ಕೇಳಿರುವುದಕ್ಕೆ The Divisional Commissioner, Gulbarga Division, Gulbarga has been requested to investigate into the allegations and to submit a detailed report to Government for taking further action ಅಂಥ ಹೇಳಿದ್ದೀರಿ. ನಾನು ಕೇಳತಕ್ಕಂಥದ್ದು ಇಷ್ಟೇ. ಕಂಪ್ಲೇಂಟ್ ಬಂದಿದ್ದರೆ ಅದು ಯಾವರೀತಿ ಕಂಪ್ಲೇಂಟ್ ಬಂದಿದೆ. ಡಿವಿಷನಲ್ ಕಮಿಷನರ್ ರವರನ್ನು ರಿಪೋರ್ಟ್ ಕೇಳಿದ್ದೇವೆಂದು ಹೇಳಿದ್ದೀರಿ. ನೀವು ಕೇಳುವುದಕ್ಕೆ ಮುಂಚಿತವಾಗಿಯೇ